ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಅಂಗನವಾಡಿ ಕೇಂದ್ರಗಳು

903 - ಡಾ// ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮಹಿಳಾ ಮತ್ತು ಮಕ್ಕಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಉತ್ತರ ಕನ್ನಡ ಜಿಲ್ಲೆಯನ್ನು ಗುಡ್ಡಗಾಡು ಪ್ರದೇಶವೆಂದು ಪರಿಗಣಿಸಲಾಗುವುದೆಂಬುದನ್ನು ಒಪ್ಪಿಕೊಂಡಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?*

ಆ) *ಗುಡ್ಡಗಾಡು ಪ್ರದೇಶದಲ್ಲಿಯ ಮಾರ್ಗ ಸೂಚಿ ಪ್ರಕಾರ 500 ಜನಸಂಖ್ಯೆಗೆ ಒಂದರಂತೆ ಅಂಗನವಾಡಿ ತೆರೆಯಲು ಬದ್ಧವಾಗಿರುವುದು ಸರ್ಕಾರದ ಗಮನದಲ್ಲಿದೆಯೇ ?*

ಇ) *ಹೀಗೆ ಹೆಚ್ಚಿನ ಅಂಗನವಾಡಿಗಳನ್ನು ತೆರೆಯಲು ಕೈಕೊಂಡ ಕ್ರಮಗಳೇನು ?*

ಶ್ರೀಮತಿ ವಿಮಲಬಾಯಿ ಜಗದೇವರಾವ್ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಇಲ್ಲ

ಆ) ಇದೆ.

ಇ) ಭಾರತ ಸರ್ಕಾರದಿಂದ ಹೊರಡಿಸಲಾಗಿರುವ ಮಾರ್ಗ ಸೂಚಿಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ 451 ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉತ್ತರ ಕನ್ನಡ ಇವರು ಪ್ರಸ್ತಾವನೆಯನ್ನು ಕಳುಹಿಸಿದ್ದು, ಇದು ಪರಿಶೀಲನೆಯಲ್ಲಿದೆ.

ತಿಪಟೂರು ನಗರ ಬಸ್ಸ್ ನಿಲ್ದಾಣ ಡಾಂಬರೀಕರಣ

905 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ತಿಪಟೂರು ನಗರ ಬಸ್ ನಿಲ್ದಾಣ ಕೇವಲ ಜಲ್ಲಿ ಕಲ್ಲನ್ನು ಹಾಕಿ ಡಾಂಬರೀಕರಣ ಮಾಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?*

ಆ) *ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?*

ಇ) *ಈ ನಿಲ್ದಾಣಕ್ಕೆ ಡಾಂಬರೀಕರಣವನ್ನು ಯಾವಾಗ ಹಾಕಲಾಗುವುದು ?*

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.